Form No.4 (Civil)
Deposition
Sheets
(R.P.No.57)

## ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,

## ಯಾದಗಿರಿ

### ಸ್ಪೆಷಲ್.ಸಿ. ಸಂಖ್ಯೆಃ 41/2016

ಪ್ರಾ.ಸಾ. 4 ಚಾ.ಸಾ. 6

| | | |
|---|---|---|
| ಹೆಸರು | : | ಅಪ್ಪಾರಾವ್ |
| ತಂದೆಯ ಹೆಸರು | : | ಚನ್ನಬಸಪ್ಪ |
| ವಯಸ್ಸು | : | 71 ವರ್ಷ |
| ಉದ್ಯೋಗ | : | ನಿ. ಎ ಡಿ ಎಲ್ ಆರ್ |
| ವಾಸ | : | ಯಾದಗಿರಿ |

ವಿಸಿ ಮುಖಾಂತರ ಪ್ರಮಾಣ ವಚನ ಭೋಧಿಸಿದ ದಿನಾಂಕಃ 20-02-2026

ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ

ನಾನು 2010 ರಿಂದ 2016 ರ ವರೆಗೆ ಪ್ರಭಾರಿ ಎ ಡಿ ಎಲ್ ಆರ್ ಆಗಿ ಎಸಿ ಕಛೇರಿಯಲ್ಲಿ ಯಾದಗಿರಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

2. ನನಗೆ ಚಾಸಾಃ 1 ರಂಗಪ್ಪ ಮತ್ತು ಈ ಪ್ರಕಣದ ಆರೋಪಿ ಗೊತ್ತು. ಲೊಕಾಯುಕ್ತ ಪೊಲಿಸರು ನನಗೆ ಪತ್ರ ಬರೆದಿದ್ದು ಅದರಂತೆ ನಾನು ಆರೊಪಿತನ ಸೇವಾ ವಿವರದ ವರದಿ ನೀಡಿರುತ್ತೆನೆ . ಸಾಕ್ಷಿಗೆ ಕಡತದಲ್ಲಿನ ಆರೋಪಿತ ಕರ್ತವ್ಯದಲ್ಲಿ ಇದ್ದ ಬಗ್ಗೆ ದಾಖಲೆಯನ್ನು ಮುಖ ಪತ್ರದೊಂದಿಗೆ ತೋರಿಸಲಾಗಿ

ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ. 34 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.34(ಎ) ಎಂದು ಗುರುತಿಸಲಾಯಿತು.

3. ಸಾಕ್ಷಿಗೆ ಕಡತದಲ್ಲಿನ ಕರ್ತವ್ಯ ಹಂಚಿಕೆಯ ದೃಡಿಕೃತ ದಾಖಲೆ ಮುಖ ಪತ್ರದೊಂದಿಗೆ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.35 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.35(ಎ) ಎಂದು ಗುರುತಿಸಲಾಯಿತು. ಸಾಕ್ಷಿಗೆ ಕಡತದಲ್ಲಿನ ಆರೋಪಿತನ ಸೇವಾ ವಿವರದ ಪತ್ರ ತೋರಿಸಲಾಗಿ ಅದರಲ್ಲಿರುವ ಸಹಿ ನೋಡಿ ಗುರುತಿಸಿದ್ದು ಅದನ್ನು ನಿ.ಪಿ.36 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ.36(ಎ) ಎಂದು ಗುರುತಿಸಲಾಯಿತು. ನಂತರ ಲೊಕಾಯುಕ್ತಪ್ರಕರಣ ದಾಖಲಾದ ಬಗ್ಗೆ ತಿಳಿಯಿತು. ಈ ಬಗ್ಗೆ ನಾನು ಪೊಲಿಸರ ಮುಂದೆ ಹೇಳಿಕೆಗಳನ್ನು ನೀಡಿರುತ್ತೆನೆ .

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಚ್ ಎಮ್ ಪಿ ವಕೀಲರಿಂದ</u>

4. ಸರ್ವೆ ಆದ ನಂತರ ಸರ್ವೆ ಅಧಿಕಾರಗಳು ನಮಗೆ ವರದಿ ಮಾಡುತ್ತಾರೆಂದರೆ ಸರಿ. ಲೊಕಾಯುಕ್ತ ಪೊಲಿಸರು ಆರೋಪಿಗೆ ಚಾಸಾಃ 1 ರವರು ವಹಿಸಿದ್ದ ಕೆಲಸ ಬಾಕಿಇದ್ದ ಬಗ್ಗೆ ಸಾಕ್ಷಿ ಕಲೆ ಹಾಕಿದ್ದು ನನಗೆ ಗೊತ್ತಿಲ್ಲ. ನನಗೆ ಯಾವುದೇ ಮಾಹಿತಿ ಇಲ್ಲದೆ ಲೊಕಾಯುಕ್ತ ಪೊಲಿಸರ ಸೂಚನೆಯಂತೆ ಹೇಳಿಕೆ ನೀಡಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದನೆಂದರೆ ಸರಿಯಲ್ಲ.

5. ನನಗೆ ಚಾಸಾಃ 1 ರಂಗಪ್ಪ ಮತ್ತು ಈ ಪ್ರಕಣದ ಆರೋಪಿ ಗೊತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲೊಕಾಯುಕ್ತ ಪೊಲಿಸರು ನನಗೆ ಪತ್ರ ಬರೆದಿದ್ದು ಅದರಂತೆ ನಾನು ಆರೊಪಿತನ ಸೇವಾ ವಿವರದ ವರದಿ ನೀಡಿರುತ್ತೆನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ-ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಯಾದಗಿರಿ.

Form No.4 (Civil)
Deposition
Sheets
(R.P.No.57)

<u>ವಿಶೇಷ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ,</u>

<u>ಯಾದಗಿರಿ</u>

<u>ಸ್ಪೆಷಲ್.ಸಿ. ಸಂಖ್ಯೆಃ 41/2016</u>

ಪ್ರಾ.ಸಾ. 5 ಚಾ.ಸಾ. 12

| | | |
|---|---|---|
| ಹೆಸರು | : | ರಮೇಶ |
| ತಂದೆಯ ಹೆಸರು | : | ಅಬ್ಲಣ್ಣ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ವ್ಯವಹಾರ |
| ವಾಸ | : | ಸುರಪೂರ |

<u>ಪ್ರಮಾಣ ವಚನ ಭೋಧಿಸಿದ ದಿನಾಂಕಃ 20-02-2026</u>

<u>ಮುಖ್ಯ ವಿಚಾರಣೆ ವಿಶೇಷ ಸರಕಾರಿ ಅಭಿಯೋಜಕರಿಂದ</u>

ನಾನು 2002 ರಿಂದ ಇಲ್ಲಿಯವರೆಗೆ ಸಂಜು ಜ್ಯೂಸ ಸೆಂಟರ ಗಾಂಧಿ ವೃತ್ತ ಸುರಪೂರದಲ್ಲಿ ನಡೆಸುತ್ತಿದ್ದೆನೆ.

2. ನನಗೆ ಚಾಸಾಃ 1 ಮತ್ತು ಆರೋಪಿತನ ಪರಿಚಯ ಇಲ್ಲ. ನನಗೆ ಈ ಪ್ರಕರಣ ಬಗ್ಗೆ ಏನೂ ಗೊತ್ತಿಲ್ಲ ನಾನು ಲೊಕಾಯುಕ್ತ ಪೊಲಿಸರಿಗೆ ಯಾವುದೆ ಹೇಳಿಕೆ ನೀಡಿಲ್ಲ.

( ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ

ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ವಿಶೇಷ ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡು ಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು. )

<u>ಪಾಟೀ ಸವಾಲು ವಿಶೇಷ ಸರಕಾರಿ ಅಭಿಯೋಜಕರಿಂದ</u>

3. ನಾನು ಮೆಲ್ಕಂಡ ವಿಳಾಸದವನಿದ್ದು--------------- ಅಂತಾ ಹೇಳಿ ಬರೆಸಿದ ಹೇಳಿಕೆ ನಿಜ ಇರುತ್ತದೆ ಎಂದು ಈಗ ವಿವರವಾಗಿ ಓದಿ ಹೇಳಿದಂತೆ ದಿಃ 03-03-2015 ರಂದು ಲೊಕಾಯುಕ್ತ ಪೊಲಿಸರ ಮುಂದೆ ಹೇಳಿಕೆ ಕೊಟ್ಟಿರುತ್ತೆನೆಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ನಿ.ಪಿ.37 ಎಂದು ಗುರುತಿಸಲಾಯಿತು. ನನಗೆ ಎಲ್ಲಾ ವಿಷಯಗೊತ್ತಿದ್ದರು ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲು ಆರೋಪಿತರ ಪರವಾಗಿ ಶ್ರೀ. ಎಚ್ ಎಮ್ ಪಿ ವಕೀಲರಿಂದ</u>

<u>ಇಲ್ಲ</u>

(ನನ್ನ ಉಕ್ತ ಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ)

ಓ.ಹೇ.ಕೆ.ಸ. ಇದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು

ಯಾದಗಿರಿ.